# **ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1215

ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.,(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 18.03.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಡಿಕೆ ಕ್ಯಾನ್ಸರ್ ಕಾರಕ ಎಂಬ ಅಪವಾದ ತೊಡೆದುಹಾಕಲು ಪ್ರತಿಷ್ಠಿತ ಸಂಸ್ಥೆಗಳಿಂದ ಸಂಶೋಧನೆ ನಡೆಸಬೇಕಾದ ತುರ್ತು ಅನಿವಾರ್ಯತೆ ಇದ್ದು, ಆ ಸಂಬಂಧ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; | **ಅಡಿಕೆ ಕ್ಯಾನ್ಸರ್ ಕಾರಕ ಎಂಬ ಅಪವಾದ ತೊಡೆದುಹಾಕಲು ಪ್ರತಿಷ್ಠಿತ ಸಂಸ್ಥೆಗಳಿಂದ ಸಂಶೋಧನೆ ನಡೆಸಲು ಕೈಗೊಂಡ ಕ್ರಮಗಳು ಕೆಳಗಿನಂತಿವೆ**:-<br><br>1. ರಾಜ್ಯ ಸರ್ಕಾರದ ವತಿಯಿಂದ ಅಡಿಕೆ ಔಷಧೀಯ ಗುಣಗಳ ಬಗ್ಗೆ ದಾಖಲೆ ಆಧಾರದಲ್ಲಿ ತಿಳಿಸಲು ತೋಟಗಾರಿಕೆ ಇಲಾಖೆ ವತಿಯಿಂದ ಎಂ.ಎಸ್. ರಾಮಯ್ಯ ಬೆಂಗಳೂರು ಸಂಸ್ಥೆಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಎಂ.ಎಸ್.ರಾಮಯ್ಯ ವಿಶ್ವ ವಿದ್ಯಾನಿಲಯರವರು ನೀಡಿರುವ ವರದಿಯಲ್ಲಿ ಅಡಿಕೆಯು ಕ್ಯಾನ್ಸರ್ ಕಾರಕವಲ್ಲ ಎಂಬ ವಿಷಯದ ಬಗ್ಗೆ ಮತ್ತು ಅಡಿಕೆಯನ್ನು ತಂಬಾಕು ಅಥವಾ ಪಾನ ಮಸಾಲಗಳೊಂದಿಗೆ ಬಳಸದೆ ಇದ್ದಲ್ಲಿ ಹಾಗೂ ಮಿತ ಹಿತ ಪ್ರಮಾಣದಲ್ಲಿ ಸೇವನೆ ಮಾಡಿದಲ್ಲಿ ಅಪಾಯಕಾರಿಯಲ್ಲವೆಂಬುದು ವರದಿಯಾಗಿದೆ.<br><br>2. ಕೇಂದ್ರ ಸರ್ಕಾರದ ವತಿಯಿಂದ ಅಡಿಕೆ ಮತ್ತು ಮಾನವ ಆರೋಗ್ಯ ಕುರಿತು ಸಾಕ್ಷ್ಯಾಧಾರ ಸಹಿತವಾದ ಸಂಶೋಧನೆ ಕೈಗೊಳ್ಳಲು Kasturba Medical College, Manipal, Council of Scientific and Industrial Research-National Botanical Research Institute, Lucknow, Council of Scientific and Industrial Research -Central Food Technological Research Institute, Mysuru, Indian Council of Agricultural Research -Central Plantation Crops Research Institute, kasragodu, NITTE University, Mangaluru, Council of Scientific and Industrial Research-Centre for Cellular & Molecular Biology, Hyderabad, National Institute of Mental Health |
| ಆ) | ಅಂತರರಾಷ್ಟ್ರೀಯ ಮಟ್ಟದಲ್ಲಿ ಅಡಿಕೆ ಬಗ್ಗೆ ಋಣಾತ್ಮಕ ಭಾವನೆ ವ್ಯಕ್ತವಾಗುತ್ತಿರುವ ಹಿನ್ನಲೆಯಲ್ಲಿ ಅಡಕೆಯ ಔಷಧೀಯ ಮತ್ತು ಉತ್ತಮ ಗುಣಗಳನ್ನು ದಾಖಲೆಯ ಆಧಾರದಲ್ಲಿ ತಿಳಿಸಲು ಅಡಿಕೆ ಉತ್ಪನ್ನಗಳ ಬಗ್ಗೆ ವ್ಯಾಪಕ ಸಂಶೋಧನೆ ತತ್‌ಕ್ಷಣ ನಡೆಯಬೇಕಾಗಿದ್ದು ಸದರಿ ಸಂಶೋಧನೆಯ ಪ್ರಗತಿ ಪ್ರಸ್ತುತ ಯಾವ ಹಂತದಲ್ಲಿದೆ ಹಾಗೂ ಈ ಕುರಿತು ಸಂಶೋಧನೆ ಕೈಗೊಂಡಿರುವ ಸಂಸ್ಥೆಗಳು ಯಾವುವು; (ಸಂಪೂರ್ಣ ವಿವರ ನೀಡುವುದು ) | |

| | | |
|---|---|---|
| | | and Neuro Sciences, Bengaluru, All India Institute of Medical Sciences, New Delhi, Shri Dharmasthala Manjunatheshwara University, Dharwad, ಗಳಿಗೆ ರೂ.3.64 ಕೋಟಿಗಳನ್ನು ಒದಗಿಸಲು ಅನುಮೋದನೆ ನೀಡಲಾಗಿದೆ. ಸದರಿ ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ಮಾರ್ಗದರ್ಶನ ಮಾಡಲು ಮೇಲ್ವಿಚಾರಣೆ ಮಾಡಲು ತೋಟಗಾರಿಕೆ ಅಯುಕ್ತರು , ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ, ಭಾರತ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. |
| ಇ) | ನೂರಾ ವರ್ಷಗಳಿಂದ ಜನರು ಅಡಿಕೆಯನ್ನು ಬಳಕೆ ಮಾಡುತ್ತಿದ್ದು ಅಡಿಕೆ ಕ್ಯಾನ್ಸರ್‌ಕಾರಕವಲ್ಲ ಎಂಬ ಸಂಗತಿಯನ್ನು ಸಾಬೀತುಪಡಿಸುವುದರ ಜೊತೆಗೆ ಸಂಶೋಧನಾ ಸಂಸ್ಥೆಗಳ ನೆರವಿನಿಂದ ಅಡಿಕೆಯ ಔಷಧೀಯ ಮತ್ತು ಉತ್ತಮ ಗುಣಗಳ ಕುರಿತು ದಾಖಲೆಯ ಆಧಾರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಗೆ ವಿಸ್ತೃತ ವರದಿ ಸಲ್ಲಿಸಬೇಕಾದ ಅನಿವಾರ್ಯತೆ ಇದ್ದು ಈ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ಸಂಶೋಧನೆ ಫಲಿತಾಂಶ ಮತ್ತು ದಾಖಲೆಗಳ ಆಧಾರದ ಮೇಲೆ ಮುಂದಿನ ಕ್ರಮಕೈಗೊಳ್ಳಲಾಗುವುದು. |

**ಸಂಖ್ಯೆ: HORTI 118 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**